**OS-148/2016**
**DW-1**

**<u>ದಿನಾಂಕಃ 17.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ **ವಾದಿ ಪರ** ಶ್ರೀ ಎ ಪಿ ಎಸ್ **ವಕೀಲರಿಂದಃ**</u>

ನನ್ನ ಮಾವನ ಹೆಸರು ಮಾದೇಗೌಡ. ನಿಡಿ-6 ರ ಮೂಲಕ ಖರೀದಿಸಿದ ಪೂರ್ವ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 80 ಅಡಿ ಜಾಗವು ಸರ್ವೆ ನಂಬರ್ 243/2 ರಲ್ಲಿ ಬರುತ್ತದೆ. ಸದರಿ ಸರ್ವೆ ನಂಬರ್ 243/2 ರ ಜಮೀನು ಸರ್ವೆ ನಂಬರ್ 243/2 ಎ 2 ಮತ್ತು 243/2 ಬಿ ಎಂದು ಪೋಡುಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ಪೂರ್ವ ಪಶ್ಚಿಮ 55 ಅಡಿ ಮತ್ತು ಉತ್ತರ ದಕ್ಷಿಣ 80 ಅಡಿ ಜಾಗವು ನನ್ನ ಮತ್ತು ನನ್ನ ಮೈದುನ ಕುಮಾರರವರ ನಡುವೆ ವಿಭಾಗವಾಗಿರುತ್ತದೆ. ಸದರಿ ನಿವೇಶನದಲ್ಲಿ 2 ನೇ ಪ್ರತಿವಾದಿಯವರಿಗೆ ಯಾವುದೇ ಭಾಗ ಇರುವುದಿಲ್ಲ. ಸದರಿ ನಿವೇಶನವು ನಮ್ಮ ಮತ್ತು ನನ್ನ ಮೈದುನ ಕುಮಾರರವರ ನಡುವೆ ವಿಭಾಗವಾದಾಗ ಪಂಚಾಯತಿ ಕಡೆಯಿಂದ ಅಳತೆ ಮಾಡಿಸಿಕೊಂಡಿದ್ದೆವು. ಸದರಿ ಅಳತೆ ಮಾಡಿಸಿದ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ನಿವೇಶನದಲ್ಲಿ ನನ್ನ ಮೈದುನ ಕುಮಾರ್ ರವರ ಭಾಗಕ್ಕೆ ಪೂರ್ವ ಪಶ್ಚಿಮ 27 ಅಡಿ ಉತ್ತರ ದಕ್ಷಿಣ 80 ಅಡಿ ಬಂದಿರುತ್ತದೆ. ಸದರಿ ನಿವೇಶನದಲ್ಲಿ ನನ್ನ ಭಾಗಕ್ಕೆ ಪೂರ್ವ ಪಶ್ಚಿಮ 28 ಅಡಿ ಉತ್ತರ ದಕ್ಷಿಣ 80 ಅಡಿ ಬಂದಿರುತ್ತದೆ. ಸದರಿ ನನ್ನ ಮೈದುನ ಕುಮಾರ್ ರವರ ನಿವೇಶನವು ನನ್ನ ನಿವೇಶನದ ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ಸದರಿ ನನ್ನ ಮೈದುನ ಕುಮಾರ್ ರವರ ನಿವೇಶನವು ಖಾಲಿ ಇರುತ್ತದೆ ಎಂದರೆ ಸರಿ. ಸದರಿ ನನ್ನ ಭಾಗಕ್ಕೆ ಬಂದ ನಿವೇಶನವು ವಾದಿಯ ನಿವೇಶನದ ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ನಮ್ಮ ಭಾಗಕ್ಕೆ ಬಂದ ನಿವೇಶನದಲ್ಲಿ ಶೀಟಿನ ಮನೆಯನ್ನು ನಿರ್ಮಿಸಿದ್ದೇನೆ ಎಂದರೆ ಸರಿ. ಸದರಿ ಮನೆ ನಿರ್ಮಿಸುವಾಗ ಗ್ರಾಮ ಪಂಚಾಯತಿಯವರಿಂದ ಪರವಾನಗಿ ಪಡೆದುಕೊಂಡಿದ್ದೇನೆ. ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಕುಮಾರ್ ರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಇರುತ್ತದೆ. ಸದರಿ ನಿವೇಶನವು ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿದೆ ಎಂದರೆ ಸರಿ. ನಾನು ಮನೆಯನ್ನು ನಿರ್ಮಿಸುವಾಗ ವಾದಿಯ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಮನೆಯನ್ನು ನಿರ್ಮಿಸಲು ತಳಪಾಯ

ತೆಗೆದಿದ್ದಾಗ ವಾದಿಯವರು ಬಂದು ನಮ್ಮನ್ನು ಪ್ರಶ್ನೆ ಮಾಡಿದ್ದರು ಎಂದರೆ ಸಾಕ್ಷಿದಾರರು ಮುಕ್ಕಾಲು ಭಾಗ ಮನೆ ನಿರ್ಮಿಸಿದ ನಂತರ ವಾದಿ ಬಂದು ಕೇಳಿದ್ದರು ಎಂದು ನುಡಿಯುತ್ತಾರೆ. ನಾನು ವಾದಿಯವರಿಗೆ ಸೇರಿದ ನಿವೇಶನವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಒತ್ತುವರಿ ಮಾಡಿಕೊಂಡಿರುವುದರಿಂದ ಅದರಿಂದ ವಾದಿಗೆ ಉಂಟಾಗುವ ನಷ್ಟಕ್ಕೆ ನಾನೇ ಜವಾಬ್ದಾರಳು ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ